## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 270 |
| ಸದಸ್ಯರ ಹೆಸರು | ಶ್ರೀ.ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 09.12.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಕೆಂಪು ಕಲ್ಲು ಕಡಿಯುವ ಪರವಾನಿಗೆ ನೀಡಲಾಗಿದೆ; ಪರವಾನಿಗೆ ನೀಡಲು ಬಾಕಿ ಇರುವ ಅರ್ಜಿಗಳು ಎಷ್ಟು; (ವಿವರ ನೀಡುವುದು) | • ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಟರೈಟ್ ಇಟ್ಟಿಗೆ (ಕೆಂಪು ಕಲ್ಲು) ತೆಗೆಯಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ-3-A(a) ರಂತೆ 74 ಕಾರ್ಯಾದೇಶಗಳನ್ನು ಮತ್ತು ನಿಯಮ-32 ರಂತೆ 21 ಲೈಸೆನ್ಸ್ ಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.<br>• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲ್ಯಾಟರೈಟ್ ಇಟ್ಟಿಗೆ (ಕೆಂಪು ಕಲ್ಲು) ತೆಗೆಯಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ-3-A(a) ರಂತೆ ಕಾರ್ಯಾದೇಶ ಕೋರಿ 55 ಅರ್ಜಿಗಳು ಮತ್ತು ನಿಯಮ-32 ರಂತೆ ಲೈಸೆನ್ಸ್‌ಗಳನ್ನು ಮಂಜೂರಾತಿ ಕೋರಿ 08 ಅರ್ಜಿಗಳು ಬಾಕಿ ಇರುತ್ತವೆ. |
| ಆ) | ಜಿಲ್ಲೆಯಲ್ಲಿ ಕೆಂಪು ಕಲ್ಲು ಅಕ್ರಮವಾಗಿ ಸಾಗಾಟವಾಗುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿವರ ಒದಗಿಸುವುದು) | • ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಚಾಲಿತದಳ ರಚಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮವಾಗಿ ಕೆಂಪುಕಲ್ಲು ಸಾಗಾಣಿಕೆ ಮಾಡುತ್ತಿರುವವರ ವಿರುದ್ಧ ಎಂ.ಎಂ.ಡಿ. ಆರ್-1957 ಕಾಯ್ದೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಪರಿಶೀಲಿಸಿ ದಂಡ ವಿಧಿಸಲಾಗುವುದು ಮತ್ತು ಮೊಕದ್ದಮೆಗಳನ್ನು ದಾಖಲಿಸಲು ಕ್ರಮವಹಿಸಲಾಗುತ್ತಿದೆ.<br>• 2023-24, 2024-25 ಮತ್ತು 2025-26 (ಅಕ್ಟೋಬರ್ ಅಂತ್ಯಕ್ಕೆ) ಅಕ್ರಮ ಕೆಂಪು ಕಲ್ಲು ಸಾಗಾಣಿಕೆ ಸಂಬಂಧ ದಾಖಲಿಸಿದ ಮೊಕದ್ದಮೆಗಳ ಹಾಗೂ ಸಂಗ್ರಹಿಸಿದ ದಂಡದ ವಿವರ ಕೆಳಕಂಡಂತಿದೆ: |

| ಕ್ರ. ಸಂ | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | ಸಂಗ್ರಹಿಸಿದ ದಂಡ ಮೊತ್ತ (ರೂ.ಲಕ್ಷ ಗಳಲ್ಲಿ) |
|---|---|---|---|---|
| 1 | 2023-24 | 74 | 1 | 20.97 |
| 2 | 2024-25 | 57 | 0 | 14.85 |
| 3. | 2025-26 | 32 | 8 | 12.03 |
| ಒಟ್ಟು | | 163 | 09 | 47.85 |

<table>
<tr><td>ಇ)</td><td>ಜಿಲ್ಲೆಯಲ್ಲಿ ಎಷ್ಟು ಮಂದಿಗೆ ಸರ್ಕಾರಿ ಭೂಮಿಯಲ್ಲಿ ಕೆಂಪು ಕಲ್ಲು ಕಡಿಯಲು ಪರವಾನಿಗೆ ನೀಡಲಾಗಿದೆ;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಭೂಮಿಯಲ್ಲಿ ಕೆಂಪು ಕಲ್ಲು ಕಡಿಯಲು ಯಾವುದೇ ಪರವಾನಿಗೆ ನೀಡಿರುವುದಿಲ್ಲ.</td></tr>
<tr><td>ಈ)</td><td>ಮಣ್ಣು ಸಾಗಿಸಲು ಪರವಾನಿಗೆ ಅಗತ್ಯವಿದೆಯೇ; ಈ ಬಗ್ಗೆ ಇರುವ ನಿಯಮವೇನು; ಕಟ್ಟಡ ಕಟ್ಟುವ ಸಂದರ್ಭದಲ್ಲಿ ಭೂಮಿ ಅಗೆತದ ಮಣ್ಣನ್ನು ಸಾಗಿಸಲು ಪರವಾನಿಗೆ ಬೇಕೆ; ಈ ಬಗ್ಗೆ ದಾಖಲಾದ ಪ್ರಕರಣಗಳು ಎಷ್ಟು; (ವಿವರ ಒದಗಿಸುವುದು)</td><td>
<ul>
<li>ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಭೂಮಿ ಅಗೆತದಿಂದ ಉತ್ಪಾದನೆಯಾಗಿ ಹೆಚ್ಚುವರಿಯಾಗಿ ಉಳಿಯುವ ಮಣ್ಣನ್ನು ಸಾಗಾಣಿಕೆ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2025ರ ನಿಯಮ-3-A(a) ರಂತೆ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ.</li>
<li>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿ ಅಗೆತದ ಮಣ್ಣನ್ನು ಸಾಗಾಣಿಕೆ ಮಾಡಲು 04 ಸಂಖ್ಯೆಯ ಕಾರ್ಯಾದೇಶಗಳನ್ನು ನೀಡಲಾಗಿರುತ್ತದೆ.</li>
<li>2023-24, 2024-25 ಮತ್ತು 2025-26 (ಅಕ್ಟೋಬರ್ ಅಂತ್ಯಕ್ಕೆ) ಮಣ್ಣು ಗಣಿಗಾರಿಕೆ/ಸಾಗಾಣಿಕೆ ಸಂಬಂಧ ದಾಖಲಿಸಿದ ಮೊಕದ್ದಮೆಗಳ ಹಾಗೂ ಸಂಗ್ರಹಿಸಿದ ದಂಡದ ವಿವರ ಕೆಳಕಂಡಂತಿದೆ:</li>
</ul>
<table>
<tr><th>ಕ್ರ.ಸಂ</th><th>ವರ್ಷ</th><th>ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ</th><th>ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ</th><th>ಸಂಗ್ರಹಿಸಿದ ದಂಡ (ರೂ.ಲಕ್ಷ ಗಳಲ್ಲಿ)</th></tr>
<tr><td>1</td><td>2023-24</td><td>06</td><td>01</td><td>1.58</td></tr>
<tr><td>2</td><td>2024-25</td><td>08</td><td>04</td><td>1.61</td></tr>
<tr><td>3</td><td>2025-26</td><td>09</td><td>0</td><td>2.38</td></tr>
<tr><td colspan="2">ಒಟ್ಟು</td><td>23</td><td>05</td><td>5.57</td></tr>
</table>
</td></tr>
<tr><td>ಉ)</td><td>ಕೆಂಪು ಕಲ್ಲುಗಳ ಮೇಲೆ ದರವನ್ನು ನಿಗಧಿಪಡಿಸಲಾಗಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ಒದಗಿಸುವುದು)</td><td>ಕೆಂಪು ಕಲ್ಲಿಗೆ (ಲ್ಯಾಟರೈಟ್ ಬ್ರಿಕ್ಸ್) ವಿಧಿಸುತ್ತಿದ್ದ ಶುಲ್ಕಗಳನ್ನು ಕಡಿಮೆ ಮಾಡಿ ಅಧಿಸೂಚನೆಯನ್ನು ದಿ:17-09-2025 ರಂದು ಹೊರಡಿಸಲಾಗಿರುತ್ತದೆ.</td></tr>
</table>

ಸಂಖ್ಯೆ ಸಿಐ -ಎಂಎಂಎನ್/296/2025

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.